

# सरयू ಸರಯೂ

ವಿದ್ಯಾಕೇಂದ್ರ ವಾರ್ತಾಪತ್ರ

SARAYU - Kannada Monthly Regn. No. KARKAN/2014/62363
August Vol. : 13 Issue : 3 5128/ ಪರಾಭವ ಸಂವತ್ಸರ ಆಗೋಸ್ಟ್ 2026 ಪುಟ 8 Rs. 10/-

Postal Regn No. PTR/136/2025-27
Licensed to Post without pre-payment
License No: SK/WPP/PTR/117/2025-27

## ಒಂದು ಮಗುವಿನ ಹೆಸರಿನಲ್ಲಿ ಒಂದು ಗಿಡ
## ಅಮ್ಟೂರು ನೈಮಿಷಾರಣ್ಯದಲ್ಲಿ ವೃಕ್ಷಾರೋಪಣ

03.07.2026



ಶ್ರೀರಾಮ ವಿದ್ಯಾಕೇಂದ್ರ ಕಲ್ಲಡ್ಕಕ್ಕೆ ಸಂಬಂಧಿಸಿದ ಅಮ್ಟೂರಿನಲ್ಲಿ ಸುಮಾರು 20 ಎಕರೆ ಜಾಗದಲ್ಲಿ ವಿವಿಧ ರೀತಿಯ ಹಣ್ಣಿನ ಗಿಡಗಳು ಹಾಗೂ ಬೇರೆ ಬೇರೆ ವಿಧದ ಗಿಡಗಳನ್ನು ನಾಟಿ ಮಾಡಲಾಯಿತು. ವಿದ್ಯಾಕೇಂದ್ರದ ಹಿರಿಯರಾದ ಡಾ । ಪ್ರಭಾಕರ ಭಟ್ ಕಲ್ಲಡ್ಕ, ಡಾ। ಕಮಲಾ ಪ್ರ. ಭಟ್ ದಂಪತಿಗಳು ಗಿಡ ನೆಟ್ಟು, ಗಿಡಕ್ಕೆ ಹಾಲೆರೆದು ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಈ ಸಂದರ್ಭದಲ್ಲಿ ವಿದ್ಯಾಕೇಂದ್ರದ ಅಧ್ಯಕ್ಷರಾದ ಶ್ರೀ ಬಿ. ನಾರಾಯಣ ಸೋಮಯಾಜಿ, ಸಂಚಾಲಕರಾದ ಶ್ರೀ ವಸಂತ ಮಾಧವ, ಆಡಳಿತ ಮಂಡಳಿ ಸದಸ್ಯರು, ಪೋಷಕರು, ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಒಂದು ದಿವಸದಲ್ಲಿ ಸುಮಾರು 700 ಗಿಡಗಳನ್ನು ನಾಟಿ ಮಾಡಲಾಯಿತು. ನಂತರದ ದಿನಗಳಲ್ಲಿ ಮಾವು, ಹಲಸು, ಸಾಗುವಾನಿ, ಗೇರು, ನುಗ್ಗೆಕಾಯಿ, ಪುನಾರ್ಪುಳಿ, ಹುಣಸೆ, ಧಾರೆಹುಳಿ, ಪಪ್ಪಾಯಿ, ನೆಲ್ಲಿಕಾಯಿ ಹೀಗೆ ವಿವಿಧ ಜಾತಿಯ ಸುಮಾರು 2000ಕ್ಕಿಂತ ಹೆಚ್ಚು ಗಿಡಗಳನ್ನು ವಿದ್ಯಾಕೇಂದ್ರದ ವಿದ್ಯಾರ್ಥಿಗಳೇ ನಾಟಿ ಮಾಡಿದರು.







## NEET UG 2026 : ವಾಸವಿ ಕೆ.ಸಿ. ಅದ್ವಿತೀಯ ಸಾಧನೆ



ರಾಷ್ಟ್ರೀಯ ಅರ್ಹತಾ ಹಾಗೂ ಪ್ರವೇಶ ಪರೀಕ್ಷೆ (NEET UG) 2026ರ ಫಲಿತಾಂಶದಲ್ಲಿ ವಾಸವಿ ಕೆ.ಸಿ. ಅತ್ಯುತ್ತಮ ಸಾಧನೆ ಮಾಡಿದ್ದು, ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮೈಲಿಗಲ್ಲು ನಿರ್ಮಿಸಿದ್ದಾರೆ. ಕಲ್ಲಡ್ಕದ ದಾಸಕೋಡಿಯ ಚಂದ್ರಶೇಖರ ಮತ್ತು ಸೌಮ್ಯ ದಂಪತಿಯ ಪುತ್ರಿಯಾಗಿರುವ ವಾಸವಿ, ಪರೀಕ್ಷೆಯಲ್ಲಿ ಒಟ್ಟು 720 ಅಂಕಗಳಲ್ಲಿ 630 ಅಂಕಗಳನ್ನು ಪಡೆದು, ರಾಷ್ಟ್ರ ಮಟ್ಟದಲ್ಲಿ 3494ನೇ ಆಲ್ ಇಂಡಿಯಾ ರ್‍ಯಾಂಕ್‌ಗಳಿಸಿದ್ದಾರೆ. ಭೌತಶಾಸ್ತ್ರದಲ್ಲಿ 99.917 ಪರ್ಸೆಂಟೈಲ್, ರಸಾಯನಶಾಸ್ತ್ರದಲ್ಲಿ 98.966 ಪರ್ಸೆಂಟೈಲ್ ಹಾಗೂ ಜೀವಶಾಸ್ತ್ರದಲ್ಲಿ 98.792 ಪರ್ಸೆಂಟೈಲ್ ಅಂಕಗಳನ್ನು ದಾಖಲಿಸಿ ಗಮನಾರ್ಹ ಸಾಧನೆ ಮೆರೆದಿದ್ದಾರೆ.



**ಗುರುಪೂಜೆ ಮತ್ತು ಸಾಮೂಹಿಕ ಹುಟ್ಟು ಹಬ್ಬ 31.7.26: ಶ್ರೀಲಕ್ಷ್ಮಿ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀರಾಮ ಶಿಶುಮಂದಿರದ ಆಡಳಿತ ಮಂಡಳಿಯ ಅಧ್ಯಕ್ಷರು ಶ್ರೀಮತಿ ಮಲ್ಲಿಕಾ ಶೆಟ್ಟಿ ಕಾರ್ಯಕ್ರಮದ ಮಹತ್ವವನ್ನು ತಿಳಿಸಿಕೊಟ್ಟರು.**



ಶಾಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದಲ್ಲಿ ಪದವಿ ಪೂರ್ವ ವಿಭಾಗದ ಶೈಲಿನಿ, ಶ್ವೇತಾ ಮಾತಾಜಿ ಮಾತಾಜಿ, ಪ್ರಾಥಮಿಕ ವಿಭಾಗದ ರಾಜೇಶ್ವರಿ ಮಾತಾಜಿ ಬಾಲಕೃಷ್ಣ ಶ್ರೀಮಾನ್ ಸ್ಫೂರ್ತಿಕ ಮಾತಾಜಿ ಹಾಗೂ, ಗುಣಶ್ರೀ ಮಾತಾಜಿ ಶಿಶು ವರ್ಗದ ತೀರ್ಪುಗಾರರಾಗಿ ದಿವ್ಯ ಮಾತಾಜಿ, ಅನುರಾಧಾ ಮಾತಾಜಿ, ಜಯಲಕ್ಷ್ಮೀ ಮಾತಾಜಿ ಸಹಕರಿಸಿದರು.



**ಶಾಲಾ ಸಂಸತ್ತು–ವಿವಿಧ ಸಂಘಗಳ ಉದ್ಘಾಟನೆ: 11.7.25**

ವಿಟ್ಲ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಶ್ರೀ ಪದ್ಮನಾಭ ಕೊಟ್ಟಾರಿ ಶಾಲಾ ಸಂಸತ್ತು ಮತ್ತು ವಿವಿಧ ಸಂಘಗಳ ಉದ್ಘಾಟನೆ ಮಾಡಿ ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.



**ಮಾತೃಭಾರತಿ ಹಾಗೂ ಶಾಲಾಭಿವೃದ್ಧಿ ಸಮಿತಿ ಸಭೆ: 29.07.2026** ವೇದವ್ಯಾಸ ಧ್ಯಾನಮಂದಿರದಲ್ಲಿ ನಡೆಯಿತು. ಶ್ರೀ ವಸಂತ ಮಾಧವ ಶ್ರೀಮಾನ್ ಪ್ರಸ್ತಾವನೆಗೈದು ನಂತರ ಸಂಸ್ಥೆಯ ಸಂಸ್ಥಾಪಕರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. 95 ಸಮಿತಿ ಸದಸ್ಯರು, ಆಡಳಿತ ಮಂಡಳಿಯ ನಾಲ್ವರು ಸದಸ್ಯರು ಉಪಸ್ಥಿತರಿದ್ದರು.



**ಗುರುಪೂಜೆ : 29.7.2026**

ಆಡಳಿತ ಮಂಡಳಿಯ ಸದಸ್ಯರು, ಮಂಗಳೂರು ಗ್ರಾಮಾಂತರ ಜಿಲ್ಲಾ ಸಂಪರ್ಕ ಪ್ರಮುಖ್ ಶ್ರೀ ಸುಜಿತ್ ಕೊಟ್ಟಾರಿ ಕಾರ್ಯಕ್ರಮದ ಮಹತ್ವ ತಿಳಿಸಿದರು. ಭೂಮಿಕಾ, ಸಾನ್ವಿ ಸನಿಲ್, ವಚನ ಪೇರಣಾ ಗೀತೆ ಹಾಡಿದರು. ಸಜಿಪಪಡು ಗ್ರಾ.ಪಂ ಕಾರ್ಯದರ್ಶಿ ಶ್ರೀಮತಿ ಗೀತಾ, ಮಾತೃಭಾರತಿ ಸದಸ್ಯರು ಶ್ರೀಮತಿ ಸಂಧ್ಯಾ ಕುದ್ರೆಬೆಟ್ಟು, ಶ್ರೀ ರವಿರಾಜ್ ಕಣಂತೂರು, ಶ್ರೀ ಸುಮಂತ್ ಆಳ್ವ ಉಪಸ್ಥಿತರಿದ್ದರು.



**ಶಾಲಾ ವಾಹನ ಶಿಕ್ಷಕರ ಬೈಠಕ್ 30.7.2026**

ಶಾಲಾ ವಾಹನದಲ್ಲಿ ಬರುವಂತಹ ಶಿಕ್ಷಕರ ಬೈಠಕ್ ಶ್ರೀರಾಮ ವಿದ್ಯಾಕೇಂದ್ರದ ಹಿರಿಯರೊಂದಿಗೆ ಮಧುಕರ ಸಭಾಂಗಣದಲ್ಲಿ ನಡೆಯಿತು.

## ಪ್ರೌಢಶಾಲೆ



ಕ್ಷೇತ್ರ ಶಿಕ್ಷಣಾಧಿಕಾರಿಗಳ ಭೇಟಿ 16.07.2026

ಶ್ರೀರಾಮ ಪ್ರೌಢಶಾಲೆಗೆ ಬಂಟ್ವಾಳ ಕ್ಷೇತ್ರ ಶಿಕ್ಷಣಾಧಿಕಾರಿಗಳು ಭೇಟಿ ನೀಡಿ ಎಸ್ಎಸ್ಎಲ್ಸಿ ಪರೀಕ್ಷೆಯ ಫಲಿತಾಂಶದ ಬಗ್ಗೆ ಅಧ್ಯಾಪಕರೊಂದಿಗೆ ಸಮಾಲೋಚನೆ ನಡೆಸಿದರು



14 ವರ್ಷದ ವಿದ್ಯಾರ್ಥಿನಿಯರಿಗೆ HPV ಲಸಿಕೆ

ದಿನಾಂಕ 20.07.2026 ರಂದು ಪ್ರಾಥಮಿಕ ಆರೋಗ್ಯ ಕೇಂದ್ರ ಬಾಳ್ತಿಲದಲ್ಲಿ ಶ್ರೀರಾಮ ಪ್ರೌಢಶಾಲೆಯ 14 ವರ್ಷದ ವಿದ್ಯಾರ್ಥಿನಿಯರಿಗೆ HPV ಲಸಿಕೆಯನ್ನು ನೀಡಲಾಯಿತು.



HPV ಲಸಿಕೆಯ ಕುರಿತು ಮಾಹಿತಿ 15.07.26 ಮಧುಕರ ಸಭಾಂಗಣದಲ್ಲಿ ಗರ್ಭಕಂಠದ ಕ್ಯಾನ್ಸರ್ ತಡೆಗಟ್ಟುವ ಕುರಿತು ಡಾ । ಜಯಪ್ರಕಾಶ್ (ಆಡಳಿತ ವೈದ್ಯಾಧಿಕಾರಿ, ಪ್ರಾಥಮಿಕ ಆರೋಗ್ಯ ಕೇಂದ್ರ ಕಲ್ಲಡ್ಕ, ಬಾಳ್ತಿಲ) ಹಾಗೂ ಶ್ರೀಮತಿ ಸರಸ್ವತಿ (ಪ್ರಾಥಮಿಕ ಆರೋಗ್ಯ ಸುರಕ್ಷಾ ಅಧಿಕಾರಿ ಕಲ್ಲಡ್ಕ) ಇವರು ಹೆಣ್ಣು ಮಕ್ಕಳ ಪೋಷಕರಿಗೆ ಮಾಹಿತಿಯನ್ನು ನೀಡಿದರು.



ಅತಿಥಿಗಳ ಭೇಟಿ: 29.07.2026: ಹನ್ನಿ ಕನಲ್ಲೆನ್ನಿ ಪ್ರೈವೇಟ್ ಲಿಮಿಟೆಡ್‌ನ ಸಂಸ್ಥಾಪಕರಾದ ಶ್ರೀ ವಿನಯ್ ಯಂ ಚೌಹಾಣ್, ಕ್ವಿಂಟಂಟ್ ಸರ್ವಿಸಸ್‌ನ ಸಂಸ್ಥಾಪಕ ಹಾಗೂ CEO ಶ್ರೀ ಎನ್ ಸಿ ಮೂರ್ತಿ, ಟ್ರಸ್ಟ್ ಲೀಡ್‌ನ ಎಸ್‌ಡಿಎಂಸಿ ಶ್ರೀಮತಿ ವಿದ್ಯಾ ಭಟ್ ವಿದ್ಯಾ–ಕೇಂದ್ರಕ್ಕೆ ಭೇಟಿ ನೀಡಿ ಮಕ್ಕಳ ಚಟುವಟಿಕೆಗಳನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಹಿರಿಯರಾದ ಡಾ. ಪ್ರಭಾಕರ್ ಭಟ್ , CEO ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ ಉಪಸ್ಥಿತರಿದ್ದರು.



ಅತಿಥಿಗಳ ಭೇಟಿ 11.07.2026ರಂದು

ದೈನಂದಿನ ಸರಸ್ವತಿ ವಂದನದಲ್ಲಿ ಶ್ರೀ ವಿಜಯ–ರೆಡ್ಡಿ ಖ್ಯಾತ ಉದ್ಯಮಿಗಳು ಹಾಗೂ ಬೆಂಗಳೂರು ಲಾಜಿಸ್ಟಿಕ್ ಕ್ಷೇತ್ರದ ಪ್ರಮುಖರು ಮತ್ತು ವಿದ್ಯಾ–ಕೇಂದ್ರದ ಹಿರಿಯರಾದ ಡಾ। ಪ್ರಭಾಕರ್ ಭಟ್ ಕಲ್ಲಡ್ಕ, ಹಿರಿಯ ಸ್ವಯಂಸೇವಕರಾಗಿರುವ ಬಾಲಕೃಷ್ಣ ಭಂಡಾರಿ, ಮುಖ್ಯ ಗುರುಗಳಾದ ಶ್ರೀ ಗೋಪಾಲ ಶ್ರೀಮಾನ್ ಉಪಸ್ಥಿತರಿದ್ದರು




**ಗಣಿತ ವಿಜ್ಞಾನ ಶಿಕ್ಷಕರ ಸನಿವಾಸ ಕಾರ್ಯಾಗಾರ**

ಜುಲೈ 26ರಿಂದ 28ರವರೆಗೆ ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ ತೆಂಕಿಲ ಪುತ್ತೂರು ಇಲ್ಲಿ ನಡೆದ ಗಣಿತ ವಿಜ್ಞಾನ ಶಿಕ್ಷಕರ ಸನಿವಾಸ ಕಾರ್ಯಾಗಾರದಲ್ಲಿ ಶ್ರೀರಾಮ ಪ್ರೌಢಶಾಲೆಯ ಶ್ರೀಮತಿ ಸೌಮ್ಯ ಪಿ , ಶ್ರೀಮತಿ ಸೌಮ್ಯ ಬಿ, ಶ್ರೀಮತಿ ಪವಿತ್ರ, ಕುಮಾರಿ ಮೇಘಶ್ರೀ ಭಾಗವಹಿಸಿದರು.

## ಸುಭಾಷಿತ ಮಂಜರಿ

ಅಬಲಸ್ಯ ಬಲಂ ರಾಜಾ
ಬಾಲಸ್ಯ ರುದಿತಂ ಬಲಂ ।
ಬಲಂ ಮೂರ್ಖಸ್ಯ ಮೌನಿತ್ವಂ
ತಸ್ಕರಸ್ಯಾನೃತಂ ಬಲಂ ॥

ದುರ್ಬಲನಿಗೆ ರಾಜನೇ ಬಲ. ಬಾಲಕನಿಗೆ ಅಳುವುದೇ ಬಲ. ಮೂರ್ಖನಿಗೆ ಮಾತನಾಡದಿರುವುದೇ ಬಲ. ಕಳ್ಳನಿಗೆ ಸುಳ್ಳೇ ಬಲ !

### ಸಂಪಾದಕೀಯ

ಕಳೆದ ವರ್ಷದಿಂದ ಪಿಯುಸಿ ವಿಭಾಗದಲ್ಲಿ ಆರಂಭಿಸಲಾದ ವಿಜ್ಞಾನ ವಿಶೇಷ ತರಗತಿಯ ವಿದ್ಯಾರ್ಥಿನಿ ವಾಸವಿ ಕೆ.ಸಿ. ಇವಳ NEET ಸಾಧನೆಗಾಗಿ 'ಸರಯೂ' ಅಭಿನಂದನೆ ಸಲ್ಲಿಸಿದೆ ಹಾಗೂ ಎಲ್ಲಾ ಸಾಧಕ ವಿದ್ಯಾರ್ಥಿಗಳಿಗೆ ಇದು ಪ್ರೇರಣೆ ನೀಡುವಂತಹುದಾಗಿದೆ. ವಿದ್ಯಾಕೇಂದ್ರದ ಪ್ರಮುಖ ಯೋಜನೆಗಳಲ್ಲೊಂದಾದ ಮಗುವಿನ ಹೆಸರಿನಲ್ಲೊಂದು ಗಿಡ ಇದಕ್ಕೆ ಸಂಬಂಧಿಸಿ ಚಟುವಟಿಕೆ ಪ್ರಾರಂಭಗೊಂಡು ಅಮ್ಟೂರು ಎಂಬಲ್ಲಿ 'ನೈಮಿಷಾರಣ್ಯ' ಹೆಸರಿನಲ್ಲಿ ಈ ಯೋಜನೆಗೆ ಚಾಲನೆ ದೊರೆತಿದ್ದು ಆಡಳಿತ ಮಂಡಳಿ, ಪೋಷಕ ವರ್ಗ ಹಾಗೂ ವಿದ್ಯಾರ್ಥಿ ಮತ್ತು ಸಿಬಂದಿವರ್ಗ ಇದರೊಂದಿಗೆ ಕೈಜೋಡಿಸಿದ್ದಾರೆ. ಉಳಿದಂತೆ ತಿಂಗಳಲ್ಲಿ ನಡೆಯುವ ವಿಶೇಷ ಕಾರ್ಯಕ್ರಮಗಳ ವರದಿಯೊಂದಿಗೆ ಸರಯೂ ನಿಮ್ಮ ಮುಂದಿದೆ.

ಸಂಪಾದಕ ಬಳಗ


### ಸಂಪಾದಕೀಯ ಮಂಡಳಿ

**ಸಂಪಾದಕರು, ಮುದ್ರಕರು ಹಾಗೂ ಪ್ರಕಾಶಕರು :**
ನಾರಾಯಣ ಸೋಮಯಾಜಿ
ಅಧ್ಯಕ್ಷರು, ಶ್ರೀರಾಮ ವಿದ್ಯಾಕೇಂದ್ರ
**ಕಾರ್ಯನಿರ್ವಾಹಕ ಸಂಪಾದಕರು :**
ಕೃಷ್ಣಪ್ರಸಾದ ಕಾಯರ್‌ಕಟ್ಟೆ
**ಸಹಸಂಪಾದಕರು :**
ರಮ್ಯ(ಶಿಶುಮಂದಿರ)
ಮಾಲತಿ(ಪ್ರಾಥಮಿಕ ಶಾಲೆ)
ನಿಕ್ಷಿತಾ (ಪ್ರೌಢಶಾಲೆ)
ದೀಪಿಕಾ (ಪಿಯುಸಿ)
ಅನನ್ಯ (ಪದವಿ)
ಉಷಾ(ಇಂಗ್ಲೀಷ್ ಮೀಡಿಯಂ ಸ್ಕೂಲ್)
**ವ್ಯವಸ್ಥಾಪಕ ಸಂಪಾದಕರು :** ಕುಶಾಲಪ್ಪ ಅಮ್ಟೂರು


**ಇಂಗ್ಲೀಷ್ ಭಾಷಾ ಕಾರ್ಯಾಗಾರ : 11.07.2026**

ಇಂಗ್ಲೀಷ್ ಭಾಷಾ ಶಿಕ್ಷಕರಿಗಾಗಿ ಶ್ರೀಮತಿ ರಾಜೇಶ್ವರಿ ಮಾತಾಜಿ ಅವರು ಇಂಗ್ಲೀಷ್ ಭಾಷಾ ಕಾರ್ಯಾಗಾರ ನಡೆಸಿದರು. ಬೆಂಗಳೂರಿನ ಜನಾಸೇವಾ ವಿದ್ಯಾಕೇಂದ್ರದಲ್ಲಿ ನಡೆದ "English content enrichment programme"ನಲ್ಲಿ ವಿವರಿಸಲಾದ ವಿಷಯವನ್ನು ಶಿಕ್ಷಕರೊಂದಿಗೆ ಹಂಚಿಕೊಳ್ಳಲಾಯಿತು. ಜೊತೆಗೆ ಪಂಚಪದಿ ಪಾಠ ಯೋಜನೆಯನ್ನು ಪರಿಚಯಿಸಿ ಅದರ ಅನುಷ್ಠಾನ ವಿಧಾನವನ್ನು ವಿವರಿಸಲಾಯಿತು. ಈ ಕಾರ್ಯಾಗಾರದಲ್ಲಿ ಪ್ರಾಥಮಿಕ ವಿಭಾಗದ ಇಂಗ್ಲೀಷ್ ಭಾಷಾ ಶಿಕ್ಷಕರು ಭಾಗವಹಿಸಿದರು.

**ಶಾಲಾ ಸಂಸತ್ತು ಮತ್ತು ವಿವಿಧ ಸಂಘಗಳ ಉದ್ಘಾಟನೆ: 11.07.2025**

ಚುನಾಯಿತರಾದ ಸದಸ್ಯರು ಹಾಗೂ ವಿರೋಧ ಪಕ್ಷದವರು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಅತಿಥಿ ಅಭ್ಯಾಗತರಿಂದ ಆಶೀರ್ವಾದ ಪಡೆದುಕೊಂಡರು. ಸಂಸತ್ತಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಭಾಪತಿಯಾದ 7ನೇ ತರಗತಿಯ ಸುಧನ್ವ ಕಾಮತ್ ಪ್ರಮಾಣ ವಚನ ಬೋಧಿಸಿದರು.

ಇದೇ ಸಂದರ್ಭದಲ್ಲಿ ವಿವಿಧ ಸಂಘಗಳಾದ ಕನ್ನಡ ಸಂಘ, ಸಂಸ್ಕೃತ ಸಂಘ, ಇಂಗ್ಲೀಷ್ ಸಂಘ, ವಿಜ್ಞಾನ/ಗಣಿತ ಸಂಘ, ಕ್ರೀಡಾ ಸಂಘ, ಸಾಂಸ್ಕೃತಿಕ ಸಂಘ ಹಾಗೂ ಕೃಷಿ ಸಂಘಗಳ ಉದ್ಘಾಟನಾ ಕಾರ್ಯಕ್ರಮವು ನೆರವೇರಿತು.

ಶಾಲಾ ನಾಯಕನಾಗಿ ಅನ್ವೇಷ್ ಪ್ರಭು, ನಾಯಕಿಯಾಗಿ ಸಮೃದ್ಧಿ, ಉಪನಾಯಕನಾಗಿ ಮನ್ವಿತ್ ಕುಲಾಲ್, ಉಪನಾಯಕಿಯಾಗಿ ಜಾಹ್ನವಿ, ಶಿಕ್ಷಣ ಮಂತ್ರಿಯಾಗಿ ಪ್ರತೀಕ್ ಮತ್ತು ಸಾನ್ವಿ ಸನಿಲ್, ಆರೋಗ್ಯ ಮಂತ್ರಿಯಾಗಿ ರಿತೇಶ್ ಮತ್ತು ತ್ರಿಶಾ , ಕೃಷಿ ಮಂತ್ರಿಯಾಗಿ ನಿಶಾಲ್ ಮತ್ತು ಪೂರ್ವಿ , ಸ್ವಚ್ಛತೆ ಹಾಗೂ ನೀರಾವರಿ ಮಂತ್ರಿಯಾಗಿ ಭುವನ್ ಮತ್ತು ಹರ್ಷಿತಾ, ಕ್ರೀಡಾ ಮಂತ್ರಿಯಾಗಿ ಜೀವಿತ್ ಮತ್ತು ಕುಶ್ಮಿತಾ, ಶಿಸ್ತು ಮಂತ್ರಿಯಾಗಿ ಕೌಶಲ್ ಮತ್ತು ತನ್ವಿ ಹಾಗೂ ಸಾಂಸ್ಕೃತಿಕ ಮಂತ್ರಿಯಾಗಿ ಪ್ರಣಮ್ ಮತ್ತು ಆರಾಧ್ಯ , ವಾರ್ತಾ ಮಂತ್ರಿಯಾಗಿ ತ್ರಿಶಾನ್ ಮತ್ತು ಪೂರ್ವಿ, ಸಭಾಪತಿಯಾಗಿ ಸುಧನ್ವ ಕಾಮತ್ ಪ್ರಮಾಣ ವಚನ ಸ್ವೀಕರಿಸಿದರು. ವಿರೋಧಪಕ್ಷದ ನಾಯಕನಾಗಿ ಸ್ಕಂದತೇಜ ಮತ್ತು ನಾಯಕಿಯಾಗಿ ಧಾತ್ರಿಕಾ ಆಯ್ಕೆಯಾಗಿದ್ದಾರೆ.

ವೇದಿಕೆಯಲ್ಲಿ ಕೊಳ್ನಾಡು ರೈತರ ಸೇವಾ ಸಹಕಾರಿ ಸಂಘದ ಅಧ್ಯಕ್ಷರಾದ ಶ್ರೀ ಕುಲ್ಯಾರು ನಾರಾಯಣ ಶೆಟ್ಟಿ ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಆಡಳಿತ ಮಂಡಳಿಯ ಸದಸ್ಯರಾದ ಶ್ರೀಮತಿ ಮಲ್ಲಿಕಾ.ಆರ್ ಶೆಟ್ಟಿ ಹಾಗೂ ಮಂಚಿ ಗ್ರಾಮ ಪಂಚಾಯಂತ್‌ನ ಪ್ರಥಮದರ್ಜೆ ಸಹಾಯಕರಾದ ಶ್ರೀಮತಿ ರೋಹಿಣಿ, ಮುಖ್ಯೋಪಾಧ್ಯಾಯರು ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಜಿಲ್ಲಾ ಮಟ್ಟದ ಶೈಕ್ಷಣಿಕ ಸಹಮಿಲನದಲ್ಲಿ ಭಾಗಿ : 18.07.2026**

ಶಕ್ತಿ ವಿದ್ಯಾಕೇಂದ್ರ ಮಂಗಳೂರು ಇಲ್ಲಿ ನಡೆದ ಜಿಲ್ಲಾ ಮಟ್ಟದ ಶೈಕ್ಷಣಿಕ ಸಹಮಿಲನದಲ್ಲಿ ಪ್ರಾಥಮಿಕ, ಪ್ರೌಢಶಾಲೆ, ಪದವಿ ಪೂರ್ವ ವಿದ್ಯಾಲಯದ ಬೋಧಕರು, ಬೋಧಕೇತರರು, ಸ್ವಚ್ಛತಾ ಪರಿಚಾರಕಿಯರು ಹಾಗೂ ವಿದ್ಯಾಕೇಂದ್ರದ ಬಸ್ ಚಾಲಕರು, ನಿರ್ವಾಹಕರು ಭಾಗವಹಿಸಿದರು.

**ಸನಿವಾಸ ತರಬೇತಿ ಕಾರ್ಯಾಗಾರದಲ್ಲಿ ಭಾಗಿ : 26.07.2026 ರಿಂದ 28.07.2026**

ಪುತ್ತೂರು ವಿವೇಕಾನಂದ ಆಂಗ್ಲ ಮಾಧ್ಯಮ ಶಾಲೆ, ತೆಂಕಿಲ ಇಲ್ಲಿ 2026–27ನೇ ಶೈಕ್ಷಣಿಕ ವರ್ಷದ ಏಳನೇ ಮತ್ತು ಎಂಟನೇ ತರಗತಿಗೆ ವಿಜ್ಞಾನ ಮತ್ತು ಗಣಿತ ವಿಷಯವನ್ನು ಬೋಧಿಸುವ ಶಿಕ್ಷಕರಿಗೆ ಸನಿವಾಸ ತರಬೇತಿ ಕಾರ್ಯಾಗಾರ ನಡೆಯಿತು. ಅಧ್ಯಾಪಕರಾದ ಶ್ರೀಮತಿ ಗುಣಶ್ರೀ, ಕುಮಾರಿ ವಾಣಿಶ್ರೀ ಭಾಗವಹಿಸಿದರು.

**ಶಾಲಾ ಮಟ್ಟದ ಗಣಿತ – ವಿಜ್ಞಾನ ಮೇಳ : 30.07.2026**

ಶಾಲಾ ಮಟ್ಟದ ಗಣಿತ ವಿಜ್ಞಾನ ಮೇಳದ ಮತ್ತು ಸಂಸ್ಕೃತಿ ಜ್ಞಾನ ಮಹೋತ್ಸವದ ಸ್ಪರ್ಧೆಗಳಾದ ವಿಜ್ಞಾನ– ಗಣಿತ ಪ್ರಯೋಗ ಹಾಗೂ ಪತ್ರಲೇಖನ ಮತ್ತು ವಾಚನ, ಕಥಾ ಕಥನ, ಸಂಸ್ಕೃತಿ ಜ್ಞಾನ ರಸಪ್ರಶ್ನೆ, ವೈದಿಕ ಗಣಿತ ರಸಪ್ರಶ್ನೆ , ವಿಜ್ಞಾನ ರಸಪ್ರಶ್ನೆ ಹಾಗೂ ಮೂರ್ತಿ ಕಲಾ ರಚನೆ, ಗಣಿತ ವಿಜ್ಞಾನ ಮಾದರಿ ಪ್ರದರ್ಶನ ಆಯೋಜಿಸಲಾಗಿತ್ತು.

## ಪ್ರೌಢಶಾಲೆ

**ಅತಿಥಿಗಳ ಭೇಟಿ 21.07.2026**



ಸರಸ್ವತಿ ವಂದನೆಯಲ್ಲಿ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರು ಇಲ್ಲಿನ ಸಹಾಯಕ ಕಾರ್ಯನಿರ್ವಹಣಾಧಿಕಾರಿ, ಕ್ಷೇತ್ರೀಯ ನೈತಿಕ ಮತ್ತು ಆಧ್ಯಾತ್ಮಿಕ ಪ್ರಮುಖ್ ಶ್ರೀ ವೆಂಕಟರಮಣರಾವ್ ಮಂಕುಡೆ ಹಾಗೂ ವಿದ್ಯಾಕೇಂದ್ರದ ಸಂಚಾಲಕರು ಶ್ರೀ ವಸಂತ ಮಾಧವ ಹಾಗೂ ಮುಖ್ಯೋಪಾಧ್ಯಾರು ಗೋಪಾಲ್ ಶ್ರೀಮನ್ ಉಪಸ್ಥಿತರಿದ್ದರು.

**ಶಾಲಾ ಸಂಸತ್ತು ಚುನಾವಣೆ 09.07.2026**

ವಿದ್ಯಾರ್ಥಿಗಳ ಶಾಲಾ ಸಂಸತ್ತು ಚುನಾವಣೆಯು ರಾಷ್ಟ್ರ ಶಕ್ತಿ ಮತ್ತು ಯುವಶಕ್ತಿ ಎಂಬ ಪಕ್ಷಗಳಲ್ಲಿ ನಡೆಯಿತು. ವಿದ್ಯಾರ್ಥಿಗಳು ಗುರುತಿನ ಚೀಟಿಯನ್ನು ತೋರಿಸಿ ಮತದಾನವನ್ನು ಚಲಾಯಿಸಿದರು. ಒಟ್ಟು ಎಂಟು ಮತಕ್ಷೇತ್ರಗಳಲ್ಲಿ ಕಂಪ್ಯೂಟರ್ ಆಧಾರಿತ ಚುನಾವಣೆ ನಡೆಸಲಾಯಿತು.

**ಮಾದಕ ದ್ರವ್ಯ ಜಾಗೃತಿ ಕಾರ್ಯಕ್ರಮ 16.07.26**

ಪ್ರೌಢಶಾಲೆಯ ಹಿರಿಯ ಶಿಕ್ಷಕರಾದ ಶ್ರೀ ಜಿನ್ನಪ್ಪ ಶ್ರೀಮಾನ್ ಇವರು ಮಾದಕ ದ್ರವ್ಯ ಜಾಗೃತಿ ಕಾರ್ಯಕ್ರಮವನ್ನು ನಡೆಸಿಕೊಟ್ಟರು." ಭಾರತವನ್ನು ವ್ಯಸನ ಮುಕ್ತ ದೇಶವನ್ನಾಗಿ ಮಾಡುವ ಸಂಕಲ್ಪವನ್ನು ಇಟ್ಟುಕೊಳ್ಳಬೇಕು" ಎಂದರು. ಮುಖ್ಯೋಪಾಧ್ಯಾಯರು ಉಪಸ್ಥಿತರಿದ್ದರು.

**ಕಾರ್ಗಿಲ್ ವಿಜಯ ದಿನೋತ್ಸವ 27.07.2026**

ಮಧುಕರ ಸಭಾಂಗಣದಲ್ಲಿ ನಡೆದ ಕಾರ್ಗಿಲ್ ವಿಜಯ ದಿನೋತ್ಸವದಲ್ಲಿ ಕಾರ್ಗಿಲ್ ಯುದ್ಧದಲ್ಲಿ ಭಾರತೀಯ ಸೈನಿಕರು ತೋರಿದ ಸಾಹಸದ ಬಗ್ಗೆ 9ನೇ ತರಗತಿಯ ಬಿನಿತ್ ತಿಳಿಸಿದನು.

**ಶಾಲಾ ಮಟ್ಟದ ಜ್ಞಾನ ವಿಜ್ಞಾನ ಮೇಳ ಸ್ಪರ್ಧೆಗಳು**

ದಿನಾಂಕ 27.07.2026 ರಿಂದ 30.07.2026ರ ವರೆಗೆ ಬಾಲ ವರ್ಗ ಮತ್ತು ಕಿಶೋರ ವರ್ಗಕ್ಕೆ ಶಾಲಾ ಮಟ್ಟದ ಜ್ಞಾನ ವಿಜ್ಞಾನ ಮೇಳದ ವಿವಿಧ ಸ್ಪರ್ಧೆಗಳನ್ನು ಆಯೋಜಿಸಲಾಯಿತು.

**ಶಾಲಾ ವಾಹನ ಚಾಲಕರ ಬೈಠಕ್ 28.07.2026**

ಪ್ರೌಢಶಾಲೆಯ ಮಧುಕರ ಸಭಾಂಗಣದಲ್ಲಿ ನಡೆದ ಈ ಸಭೆಯಲ್ಲಿ ವಿದ್ಯಾಕೇಂದ್ರದ ಹಿರಿಯರಾದ ಡಾ। ಪ್ರಭಕರ ಭಟ್ ಕಲ್ಲಡ್ಕ ಮಾರ್ಗದರ್ಶನ ಮಾಡಿದರು. ಸಂಚಾಲಕರಾದ ಶ್ರೀ ವಸಂತ ಮಾಧವ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕೆ, ಸಹಾಯಕ ಕಾರ್ಯನಿರ್ವಹಣಾಧಿಕಾರಿ ಹಾಗೂ ಶಾಲಾ ವಾಹನದ ವ್ಯವಸ್ಥಾಪಕರು ಶ್ರೀ ರವಿರಾಜ್ ಕಣಂತೂರು ಉಪಸ್ಥಿತರಿದ್ದರು.

**ಇಂಗ್ಲೀಷ್ ಮೀಡಿಯಂ ಸ್ಕೂಲ್**

**ಜಿಲ್ಲಾಮಟ್ಟದ ಚದುರಂಗ ಸ್ಪರ್ಧೆ: 7.7.2026**

ಸರಸ್ವತಿ ಆಂಗ್ಲ ಮಾಧ್ಯಮ ಶಾಲೆ ಕಡಬದಲ್ಲಿ ನಡೆದ ವಿದ್ಯಾಭಾರತಿ ಜಿಲ್ಲಾಮಟ್ಟದ ಚದುರಂಗ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳಾದ ಪ್ರಥಮ್, ಅನಿರುದ್ಧ, ಅದ್ವಿಕ 7ನೇ ತರಗತಿ, ಸ್ವಸಿಕ್ 8ನೇ ತರಗತಿ, ಸಂಮಿತ್, ಹೇಮಂತ್, ವಿಸ್ಮೃತ ಕೋಟ್ಯಾನ್, ಶುಶ್ರುತ್ ಶರ್ಮ 9ನೇ ತರಗತಿ ಈ ವಿದ್ಯಾರ್ಥಿಗಳು ಭಾಗವಹಿಸಿರುತ್ತಾರೆ.

**ಭಜನಾ ಕಾರ್ಯಕ್ರಮ 31.07.2026**



ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನಲ್ಲಿ ಜುಲೈ ತಿಂಗಳ ಭಜನಾ ಕಾರ್ಯಕ್ರಮ ಹಾಗೂ ಸಾಮೂಹಿಕ ಹುಟ್ಟುಹಬ್ಬವನ್ನು ಆಚರಿಸಲಾಯಿತು. ವಿದ್ಯಾರ್ಥಿಗಳಿಗೆ ಮಾತಾಜಿಗಳು ಆರತಿ ಬೆಳಗಿ, ತಿಲಕಧಾರಣೆ ಮಾಡಿದರು. ವಿದ್ಯಾರ್ಥಿಗಳು ಭಾರತಮಾತೆಗೆ ಪುಷ್ಪಾರ್ಚನೆ ಮಾಡಿ ಶ್ರದ್ಧಾ ನಿಧಿ ಸಮರ್ಪಿಸಿದರು

## ಪದವಿಪೂರ್ವ

**ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಘಟಕದ ರಚನೆ 09.07.2026**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ABVP) ವತಿಯಿಂದ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಘಟಕದ ರಚನೆ ಮಾಡಲಾಯಿತು. ಘಟಕದ ಅಧ್ಯಕ್ಷರಾಗಿ ಕೃತಿ, ಕಾರ್ಯದರ್ಶಿಯಾಗಿ ಪವನ್, ನಿನಾದ್ ಸಂಪರ್ಕ ಪ್ರಮುಖ್, ಕೃಪಾಲಿ ವಿದ್ಯಾರ್ಥಿನಿ ಸಂಪರ್ಕ ಪ್ರಮುಖ್, ಅರ್ಪಿತಾ SFD ಪ್ರಮುಖ್, ಜನನಿ SFS ಪ್ರಮುಖ್ ಹಾಗೂ ತ್ರಿಶಾರನ್ನು ಕಲಾಮಂಚ್ ಪ್ರಮುಖ್‌ರಾಗಿ ಆಯ್ಕೆ ಮಾಡಲಾಯಿತು ಭರತ್ , ಪ್ರಣಾಮ್ ಮತ್ತು ಭವಿಷ್ ಅವರನ್ನು ಕಾರ್ಯಕಾರಿಣಿ ಸದಸ್ಯರನ್ನಾಗಿ ನೇಮಿಸಲಾಯಿತು.

**ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸಂಬಂಧಿಸಿದ ಕೋಚಿಂಗ್ ತರಗತಿಯ ಉದ್ಘಾಟನೆ 11.07.2026**

ಭಾಮತೀ ವಾಣಿಜ್ಯ ಸಂಘದ ವತಿಯಿಂದ ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳಿಗಾಗಿ ಬ್ಯಾಂಕಿಂಗ್ ಸ್ಪರ್ಧಾತ್ಮಕ ಪರೀಕ್ಷೆಗಳ ತಯಾರಿಗೆ ಸಂಬಂಧಿಸಿದ ಕೋಚಿಂಗ್ ತರಗತಿಗಳನ್ನು ಆರಂಭಿಸಲಾಯಿತು. ಈ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಐಆರ್‌ಎಂಸಿಡಿ ಸಂಸ್ಥೆಯ ಕಾರ್ಯ ನಿರ್ವಾಹಣಾಧಿಕಾರಿ ಆಗಿರುವ ಶ್ರೀಮತಿ ಪ್ರಫುಲ್ಲಾ ಗಣೇಶ್ ಅವರು ದೀಪ ಪ್ರಜ್ವಲನೆ ಮಾಡುವ ಮೂಲಕ ಕೋಚಿಂಗ್ ತರಗತಿಗಳಿಗೆ ಚಾಲನೆ ನೀಡಿ–ದರು. ಕಾರ್ಯಕ್ರಮದಲ್ಲಿ ಐಆರ್‌ಎಂಸಿಡಿ ಸಂಸ್ಥೆಯ ತರಬೇತುದಾರರಾದ ಕುಮಾರಿ ಭವ್ಯ ಪ್ರಾಂಶುಪಾಲರಾದ ಶ್ರೀ ವಸಂತ್ ಬಲ್ಲಾಳ್, ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀ ದಿನೇಶ್ ಹಾಗೂ ಐಆರ್‌ಎಂಸಿಡಿ ಸಂಸ್ಥೆಯ ಮುಖ್ಯಸ್ಥರಾದ ಶ್ರೀ ಗಣೇಶ್ ಉಪಸ್ಥಿತರಿದ್ದರು. ಕಾರ್ಯಕ್ರಮವನ್ನು ಭಾಮತೀ ವಾಣಿಜ್ಯ ಸಂಘದ ನಿರ್ದೇಶಕಿ ಶ್ರೀಮತಿ ಶೋಭಾ ಅವರು ನಿರ್ವಹಿಸಿದರು.

**ವಿದ್ಯಾರ್ಥಿ ಸಂಘ ಹಾಗೂ ವಿವಿಧ ಸಂಘಗಳ ಉದ್ಘಾಟನೆ ಕಾರ್ಯಕ್ರಮ 11.07.2026**

ವಿದ್ಯಾರ್ಥಿ ಸಂಘ ಹಾಗೂ ವಿವಿಧ ಸಂಘಗಳ ಉದ್ಘಾಟನೆಯನ್ನು ದೀಪ ಬೆಳಗಿಸುವ ಮೂಲಕ ನೆರವೇರಿಸಲಾಯಿತು.ಅತಿಥಿಗಳಾದ ಮಾಜಿ ಸದಸ್ಯರು, ತಾಲೂಕು ಪಂಚಾಯತ್ ಬಂಟ್ವಾಳ ಸಹ ಸಂಚಾಲಕರು ಬಿಜೆಪಿ ಜಿಲ್ಲಾ ಪ್ರಬುದ್ಧರ ಪ್ರಕೋಷ್ಠ ಶ್ರೀ ಮೋಹನ್ ಪಿ.ಎಸ್ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಬಾಲ್ಯದಲ್ಲಿಯೇ ನಾಯಕತ್ವದ ಗುಣಗಳಾದ ಪರಸ್ಪರ ಸಹಕಾರ, ಸಹನೆ, ತಾಳ್ಮೆ ,ಸೇವಾ ಮನೋಭಾವ ಮೈಗೂಡಿಸುವಂತೆ ಪ್ರೇರೇಪಿಸುವುದರ ಮೂಲಕ ಪದಾಧಿಕಾರಿಗಳಿಗೆ ಶುಭಕೋರಿದರು: ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಪ್ರತಿನಿಧಿಗಳಿಗೆ ಪ್ರಮಾಣ ವಚನ ಬೋಧಿಸಿದರು. ವಿದ್ಯಾರ್ಥಿ ಸಂಘದ ನಿರ್ದೇಶಕಿಯಾದ ಹಾಗೂ ಗಣಿತಶಾಸ್ತ್ರದ ಉಪನ್ಯಾಸಕಿಯಾದ ಶ್ರೀಮತಿ ಜಯಲಕ್ಷ್ಮಿ ಚುನಾವಣೆ ಪ್ರಕ್ರಿಯೆಯ ವರದಿಯನ್ನು ನೀಡಿದರು. ಪೋಷಕರಾದ ಶ್ರೀಮತಿ ಶ್ವೇತಾ ಕಾಮತ್ ವಿಟ್ಲ, ಶ್ರೀಮತಿ ರೋಹಿಣಿ ಅಡ್ಯಾರ್ ಕಟ್ಟೆ ಉಪಸ್ಥಿತರಿದ್ದರು.

**ಭಾಮತಿ ವಾಣಿಜ್ಯ ಸಂಘ ಉದ್ಘಾಟನೆ 13.7.26**

ಭಾಮತಿ ವಾಣಿಜ್ಯ ಸಂಘವನ್ನು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಎಟಿಎಂ ಮಾದರಿಯಿಂದ ಪ್ರಾತಿನಿಧಿಕವಾಗಿ ಮೊದಲ ಹಣವನ್ನು ಪಡೆದು ಸಂಘಕ್ಕೆ ಅಧಿಕೃತ ಚಾಲನೆ ನೀಡಿದರು. ಕಾರ್ಯಕ್ರಮದ ಮುಖ್ಯ ಅತಿಥಿಯಾದ ವಿವೇಕಾನಂದ ಪದವಿ ಪೂರ್ವ ಕಾಲೇಜು ಪುತ್ತೂರಿನ ವಾಣಿಜ್ಯಶಾಸ್ತ್ರ ಉಪನ್ಯಾಸಕರಾದ ಶ್ರೀಯುತ ಶ್ರೀಧರ ಶೆಟ್ಟಿಗಾರ್ ನಿರ್ವಹಣಾ ತಜ್ಞ ಎಫ್. ಡಬ್ಲ್ಯೂ. ಟೇಲರ್ ಅವರ ಯೋಜನೆ ಮತ್ತು ಅನುಷ್ಠಾನ ತತ್ವವನ್ನು ಉಲ್ಲೇಖಿಸಿ, ಉತ್ತಮ ಯೋಜನೆಯೊಂದಿಗೆ ಸಮರ್ಪಕ ಅನುಷ್ಠಾನವೂ ಯಶಸ್ಸಿನ ಪ್ರಮುಖ ಅಂಶವಾಗಿದೆ ಎಂದು ಹೇಳಿದರು. ವಾಣಿಜ್ಯ ಸಂಘವು ವಿದ್ಯಾರ್ಥಿಗಳಲ್ಲಿ ನಾಯಕತ್ವ, ಜವಾಬ್ದಾರಿಯುತ ಮನೋಭಾವ ಹಾಗೂ ವ್ಯಕ್ತಿತ್ವ ವಿಕಸನಕ್ಕೆ ಪೂರಕ ವೇದಿಕೆಯಾಗಿದೆ ಎಂದು ತಿಳಿಸಿದರು. ವೇದಿಕೆಯಲ್ಲಿ ಉಪ ಪ್ರಾಂಶುಪಾಲರು ಮತ್ತು ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀ ದಿನೇಶ್ ಹಾಗೂ ವಾಣಿಜ್ಯ ಸಂಘದ ನಿರ್ದೇಶಕಿ ಹಾಗೂ ವಾಣಿಜ್ಯ ವಿಭಾಗದ ಉಪನ್ಯಾಸಕರಾದ ಶ್ರೀಮತಿ ಶೋಭ ಉಪಸ್ಥಿತರಿದ್ದರು.

**ಬ್ರೈಟ್ ವಿಷನ್ ಇಂಗ್ಲೀಷ್ ಅಸೋಸಿಯೇಷನ್ ಉದ್ಘಾಟನೆ 13.07.2026**

ದೀಪ ಪ್ರಜ್ವಲನೆ ಹಾಗೂ ಭಾರತ ಮಾತೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡುವ ಮೂಲಕ ನಡೆಯಿತು. ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ವಿವೇಕಾನಂದ ಪದವಿ ಪೂರ್ವ ಕಾಲೇಜು, ಪುತ್ತೂರಿನ ನಿವೃತ್ತ ಇಂಗ್ಲೀಷ್ ಉಪನ್ಯಾಸಕರಾದ ಶ್ರೀಮತಿ ಜಯಶ್ರೀ ಭಟ್ ಮಾತನಾಡಿ ಇಂಗ್ಲೀಷ್ ಭಾಷೆಯ ಮಹತ್ವ, ಪರಿಣಾಮಕಾರಿ ಸಂವಹನ ಕೌಶಲ್ಯ, ಓದುವ ಅಭ್ಯಾಸ ಹಾಗೂ ವ್ಯಕ್ತಿತ್ವ ವಿಕಾಸದ ಕುರಿತು ಪ್ರೇರಣಾದಾಯಕ ಉಪನ್ಯಾಸ ನೀಡಿ–ದರು. ಇಂಗಿಷ್ ಅಸೋಸಿಯೇಷನ್‌ನ ವಿವಿಧ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸುವಂತೆ ಕರೆ ನೀಡಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ವಹಿಸಿದ್ದರು. ನಿರ್ದೇಶಕಿಯಾದ ಶ್ರೀಮತಿ ರೋಹಿಣಿ ಉಪಸ್ಥಿತರಿದ್ದರು.

**ವಿಜ್ಞಾನ ಸಂಘ ಉದ್ಘಾಟನೆ** 15.07.2026

ಪ್ರಥಮ ದರ್ಜೆ ಮಹಾವಿದ್ಯಾಲಯದ, ಗಣಿತ ಉಪನ್ಯಾಸಕರಾದ ಶ್ರೀಮತಿ ಸುಸ್ಮಿತಾ ಕಾರ್ಯಕ್ರಮದ ಬಗ್ಗೆ ಮಾತನಾಡಿದರು. ವಿಜ್ಞಾನ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಶೈಲಿನಿ ಅವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿ, ಪ್ರತಿಯೊಂದು ಸ್ಪರ್ಧೆಯಲ್ಲೂ ಸಕ್ರಿಯವಾಗಿ ಭಾಗವಹಿಸುವ ಮೂಲಕ ಹೊಸ ವಿಷಯಗಳನ್ನು ಕಲಿಯಬೇಕು, ಹೊಸ ಕೌಶಲ್ಯಗಳನ್ನು ಬೆಳೆಸಿಕೊಳ್ಳಬೇಕು ಎಂದರು

**ಜ್ಞಾನ ವಿಜ್ಞಾನ ಮಾದರಿ ಸ್ಪರ್ಧೆ 15.7.2026**

ಕಾಲೇಜು ಮಟ್ಟದ ಜ್ಞಾನ–ವಿಜ್ಞಾನ ಮಾದರಿ ಸ್ಪರ್ಧೆಯಲ್ಲಿ ವಿದ್ಯಾರ್ಥಿಗಳು ತಯಾರಿಸಿದ ನವೀನ ಹಾಗೂ ಸೃಜನಾತ್ಮಕ ವಿಜ್ಞಾನ ಮಾದರಿಗಳನ್ನು ಪ್ರದರ್ಶಿಸಲಾಯಿತು. ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನ ಉಪ ಪ್ರಾಂಶುಪಾಲರಾದ ಕುಮಾರಿ ಶ್ವೇತಾ ಹಾಗೂ ವಿಜ್ಞಾನ ಅಧ್ಯಾಪಕರಾದ ಶ್ರೀ ಜಯಪ್ರಸಾದ್ ಸ್ಪರ್ಧೆಯ ತೀರ್ಪುಗಾರರಾಗಿ ಭಾಗವಹಿಸಿದರು. ಅವರು ವಿದ್ಯಾರ್ಥಿಗಳು ಪ್ರದರ್ಶಿಸಿದ ಮಾದರಿಗಳನ್ನು ಸೃಜನಶೀಲತೆ, ವೈಜ್ಞಾನಿಕ ಜ್ಞಾನ, ಪ್ರಸ್ತುತಿ ಹಾಗೂ ಒಟ್ಟಾರೆ ಕಾರ್ಯಕ್ಷಮತೆ ಮುಂತಾದ ಮಾನದಂಡಗಳ ಆಧಾರದ ಮೇಲೆ ಮೌಲ್ಯಮಾಪನ ಮಾಡಿದರು.

**ಗುರು ಪೂರ್ಣಿಮೆ ದಿನಾಚರಣೆ 29.07.2026**

ಗುರು ಪೂರ್ಣಿಮೆ ದಿನಾಚರಣೆಯಲ್ಲಿ ಅತಿಥಿ ಅಭ್ಯಾಗತರು ದೀಪ ಪ್ರಜ್ವಲಿಸಿ, ಭಾರತ ಮಾತೆಗೆ ಪುಷ್ಪಾರ್ಚನೆ ಸಲ್ಲಿಸಿದರು. ಪದವಿ ಮಹಾವಿದ್ಯಾಲಯ ಕಲ್ಲಡ್ಕದ ಉಪಪ್ರಾಂಶುಪಾಲರು ಹಾಗೂ ಕನ್ನಡ ಉಪನ್ಯಾಸಕರಾದ ಶ್ರೀ ಯತಿರಾಜ್ ಗುರು ಪೂರ್ಣಿಮೆಯ ಮಹತ್ವವನ್ನು ತಿಳಿಸಿದರು. ಉಪಪ್ರಾಂಶುಪಾಲರು ಹಾಗೂ ವಾಣಿಜ್ಯ ವಿಭಾಗದ ಮುಖ್ಯಸ್ಥರಾದ ಶ್ರೀ ದಿನೇಶ್ ಉಪಸ್ಥಿತರಿದ್ದರು.

**ಪ್ರಾಂತ ಮಟ್ಟದ ಕ್ರೀಡಾಕೂಟದಲ್ಲಿ ಸಾಧನೆ**

ದಿನಾಂಕ 29 ರಿಂದ 31ವರೆಗೆ ಕಲಬುರ್ಗಿಯ ಚಂದ್ರಶೇಖರ ಪಾಟೀಲ್ ಕ್ರೀಡಾಂಗಣದಲ್ಲಿ ನಡೆದ ಪ್ರಾಂತ ಮಟ್ಟದ ಕ್ರೀಡಾಕೂಟದಲ್ಲಿ ಪದವಿ ಪೂರ್ವ ವಿದ್ಯಾಲಯದ ವಿದ್ಯಾರ್ಥಿಗಳು ಭಾಗವಹಿಸಿ ಕ್ಷೇತ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾ–ರೆ. 19ರ ವಯೋಮಾನದ ಬಾಲಕರ ವಿಭಾಗ: ಹ್ಯಾಮರ್ ಥ್ರೋ: ಆಯುಷ್– ದ್ವಿತೀಯ ಸ್ಥಾನ (ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗ) ಜಾವೆಲಿನ್ ಥ್ರೋ: ದೀಕ್ಷಿತ್ – ಪ್ರಥಮ ಸ್ಥಾನ (ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗ) 800 ಮೀಟರ್ ಓಟದಲ್ಲಿ ಆಶ್ಲೇಷ್– ದ್ವಿತೀಯ ಸ್ಥಾನ (ದ್ವಿತೀಯ ವಿಜ್ಞಾನ ವಿಭಾಗ) ಬಾಲಕಿಯರ ವಿಭಾಗ: ಹ್ಯಾಮರ್ ಥ್ರೋ: ಪಲ್ಲವಿ – ಪ್ರಥಮ ಸ್ಥಾನ ( ದ್ವಿತೀಯ ಕಲಾ ವಿಭಾಗ) ರೇಸ್ ವಾಕ್: ಯಶಸ್ವಿನಿ – ಪ್ರಥಮ ಸ್ಥಾನ (ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗ) ಪೋಲ್ ವಾಲ್ಟ್: ಗೌರವ್ – ಪ್ರಥಮ ಸ್ಥಾನ (ದ್ವಿತೀಯ ಪಿಯುಸಿ ಕಲಾ ವಿಭಾಗ) ಹಾಗೂ ರಾಷ್ಟ್ರೀಯ ಮಟ್ಟಕ್ಕೆ ನೇರ ಆಯ್ಕೆ.

**ಪದವಿ ವಿಭಾಗ**

**ಅಂತಿಮ ಪದವಿ ಪರೀಕ್ಷೆ 2026 ಜೂನ್– ಜುಲೈ ಫಲಿತಾಂಶ.**

ಪದವಿ ವಿಭಾಗದ ವಾಣಿಜ್ಯ ವಿಭಾಗದಲ್ಲಿ 91.67%, ಬಿಸಿಎ ವಿಭಾಗದಲ್ಲಿ 92.59% ಹಾಗೂ ಬಿಎ ವಿಭಾಗದಲ್ಲಿ 73% ಫಲಿತಾಂಶ ದಾಖಲಾಗಿದೆ. ವಾಣಿಜ್ಯ ವಿದ್ಯಾರ್ಥಿನಿ ಕು. ಹರ್ಷಿತ 95% ಅಂಕ, ಬಿಸಿಎ ವಿಭಾಗದಲ್ಲಿ ದಿವ್ಯ ಲಕ್ಷ್ಮಿ 96.46% ಅಂಕ, ಬಿಎ ವಿಭಾಗದಲ್ಲಿ ಲಕ್ಷ್ಮಿ 88% ಅಂಕ ಗಳಿಸಿ ತರಗತಿಯಲ್ಲಿ ಅಗ್ರಸ್ಥಾನವನ್ನು ಪಡೆದಿರುತ್ತಾರೆ.

**ಶ್ರೀ ರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕದ ಬಿಸಿಎ ವಿಭಾಗದ ವತಿಯಿಂದ ತಾಂತ್ರಿಕ ಸಂವಾದ ಕಾರ್ಯಕ್ರಮ**

ಬಿಸಿಎ ವಿಭಾಗವು CodeLab Systems ಸಹಯೋಗದೊಂದಿಗೆ 2026ರ ಜುಲೈ 24ರಂದು ಅಂತಿಮ ವರ್ಷದ (III BCA) ವಿದ್ಯಾರ್ಥಿಗಳಿಗಾಗಿ "Emerging Trends in Technology" (ತಂತ್ರಜ್ಞಾನದಲ್ಲಿನ ಉದಯೋನ್ಮುಖ ಪ್ರವೃತ್ತಿಗಳು) ಎಂಬ ವಿಷಯದ ಕುರಿತು ಸಂವಾದಾತ್ಮಕ ತಾಂತ್ರಿಕ ಅಧಿವೇಶನವನ್ನು ಸಾವರ್ಕರ್ ಸಭಾಂಗಣದಲ್ಲಿ ಆಯೋಜಿಸಿತು. ಉಪಪ್ರಾಂಶುಪಾಲರಾದ ಶ್ರೀಮತಿ ಸುಕನ್ಯಾ ಸಿ., ಬಿಸಿಎ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ತೃಪ್ತಿ ಶೆಟ್ಟಿ, Code-Lab System ಸಂಸ್ಥೆಯ HR Manager ಶ್ರೀಮತಿ ರುಚಿತಾ ಜಿ. ಎಂ. (MBA), ಬಿಸಿಎ ವಿಭಾಗದ ಉಪನ್ಯಾಸಕರು ಹಾಗೂ ಅಂತಿಮ ವರ್ಷದ ಬಿಸಿಎ ವಿದ್ಯಾರ್ಥಿಗಳ ಗೌರವಾನ್ವಿತ ಉಪಸ್ಥಿತಿಯಲ್ಲಿ ಕಾರ್ಯಕ್ರಮವು ನಡೆಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಯಾಗಿ CodeLab Systems ಸಂಸ್ಥೆಯ ತಾಂತ್ರಿಕ ಇಂಜಿನಿಯರ್ ಶ್ರೀ ಧನುಷ್, ಬಿ.ಇ. ಅವರು ಭಾಗವಹಿಸಿ, ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳ ಕುರಿತು ವಿದ್ಯಾರ್ಥಿಗಳಿಗೆ ಸಮಗ್ರ ಮಾಹಿತಿ ನೀಡಿದರು. ಅವರು ಕೃತಕ ಬುದ್ಧಿಮತ್ತೆ (Artificial Intelligence ), ಡೇಟಾ ಸೈನ್ಸ್, ಸೈಬರ್ ಸುರಕ್ಷತೆ, ಕ್ಲೌಡ್ ಕಂಪ್ಯೂಟಿಂಗ್, ಫುಲ್ ಸ್ಟ್ಯಾಕ್ ಡೆವಲಪ್ಮೆಂಟ್ ಸೇರಿದಂತೆ ವಿವಿಧ ಉದಯೋನ್ಮುಖ ತಂತ್ರಜ್ಞಾನಗಳ ಬಗ್ಗೆ ವಿವರಿಸಿದರು. .

**ಭಾರತೀಯ ವಾಯುಪಡೆಯ ಉದ್ಯೋಗಾವಕಾಶಗಳ ಕುರಿತು ಜಾಗೃತಿ ಕಾರ್ಯಕ್ರಮ**

ಶ್ರೀರಾಮ ಪ್ರಥಮ ದರ್ಜೆ ಕಾಲೇಜು, ಕಲ್ಲಡ್ಕದ ಉದ್ಯೋಗ ನಿಯೋಜನಾ ಘಟಕ (Placement Cell) ಹಾಗೂ ಆಂತರಿಕ ಗುಣಮಟ್ಟ ಭರವಸೆ ಘಟಕ (IQAC) ಸಂಯುಕ್ತ ಆಶ್ರಯದಲ್ಲಿ 2026ರ ಜುಲೈ 24ರಂದು ಮಧ್ಯಾಹ್ನ 12:30 ಗಂಟೆಗೆ ಆಸಕ್ತ ವಿದ್ಯಾರ್ಥಿಗಳಿಗಾಗಿ ಭಾರತೀಯ ವಾಯುಪಡೆಯ ಉದ್ಯೋಗಾವಕಾಶಗಳ ಕುರಿತು ಜಾಗೃತಿ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಕಾರ್ಯಕ್ರಮದ ಸಂಪನ್ಮೂಲ ವ್ಯಕ್ತಿಗಳಾಗಿ ಭಾರತೀಯ ವಾಯುಪಡೆಯ ಸಾರ್ಜೆಂಟ್ ವಿಜಯ್, ಸಾರ್ಜೆಂಟ್ ಬಲ್ಜಿತ್ ಹಾಗೂ ಮಂಗಳೂರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಕೌನ್ಸಿಲರ್ ಹಾಗೂ ತರಬೇತುದಾರರಾದ ಶ್ರೀಮತಿ ಮಂಜುಷಾ ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಸಾರ್ಜೆಂಟ್ ವಿಜಯ್ ಅವರು ಭಾರತೀಯ ವಾಯುಪಡೆಯಲ್ಲಿರುವ ವಿವಿಧ ಉದ್ಯೋಗಾವಕಾಶಗಳ ಕುರಿತು ಸಮಗ್ರ ಮಾಹಿತಿಯನ್ನು ನೀಡಿದರು. ವಾಯುಪಡೆಗೆ ಸೇರ್ಪಡೆಯಾಗಲು ಅಗತ್ಯವಾದ ಅರ್ಹತೆಗಳು, ಆಯ್ಕೆ ಪ್ರಕ್ರಿಯೆ, ನೇಮಕಾತಿ ಪರೀಕ್ಷೆಗಳು, ದೈಹಿಕ ಹಾಗೂ ವೈದ್ಯಕೀಯ ಮಾನದಂಡಗಳು, ತರಬೇತಿ ವಿಧಾನ ಮತ್ತು ವಾಯುಪಡೆಯಲ್ಲಿನ ವಿವಿಧ ವೃತ್ತಿ ಅವಕಾಶಗಳ ಕುರಿತು ವಿವರವಾಗಿ ತಿಳಿಸಿದರು.

### ಶ್ರೀರಾಮ ಶಿಶುಮಂದಿರ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| ಶಿಶುಮಂದಿರ | 6 | 81 | 86 | **167** |
| ಶಿಶುಮಂದಿರ | 1 | 5 | 5 | **10** |
| ಶ್ರೀಕೃಷ್ಣ ಶಿಶುಮಂದಿರ | 1 | 12 | 14 | **26** |
| ಅಕ್ಕಮಹಾದೇವಿ ಶಿಶುಮಂದಿರ | 1 | 19 | 14 | **33** |
| ಸರಸ್ವತಿ ಶಿಶುಮಂದಿರ | 1 | 14 | 8 | **22** |
| ಒಟ್ಟು | **10** | **131** | **127** | **258** |

### ಶ್ರೀರಾಮ ಪ್ರಾಥಮಿಕ ಶಾಲೆ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 1 | 2 | 32 | 23 | **55** |
| 2 | 4 | 60 | 52 | **112** |
| 3 | 5 | 68 | 63 | **131** |
| 4 | 5 | 79 | 65 | **144** |
| 5 | 4 | 80 | 74 | **154** |
| 6 | 6 | 113 | 96 | **209** |
| 7 | 5 | 115 | 75 | **190** |
| | 31 | **547** | **448** | **995** |

### ಶ್ರೀರಾಮ ಪ್ರೌಢಶಾಲೆ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| 8 | 6 | 151 | 120 | 271 |
| 9 | 6 | 142 | 139 | 281 |
| 10 | 7 | 156 | 125 | 281 |
| ಒಟ್ಟು | **19** | **449** | **384** | **833** |

### ಶ್ರೀರಾಮ ಇಂಗ್ಲೀಷ್ ಮೀಡಿಯಂ ಸ್ಕೂಲ್, ಕಲ್ಲಡ್ಕ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| Pre Primary | **7** | **101** | **95** | 196 |
| 1 | **2** | **36** | **37** | 73 |
| 2 | **2** | **35** | **26** | 61 |
| 3 | **1** | **19** | **26** | 45 |
| 4 | **2** | **31** | **27** | 58 |
| 5 | 2 | 38 | 28 | 66 |
| 6 | 2 | 37 | 40 | 77 |
| 7 | 2 | 42 | 28 | 70 |
| 8 | 2 | 51 | 34 | 85 |
| 9 | 3 | 62 | 53 | 115 |
| 10 | 2 | 38 | 21 | 59 |
| ಒಟ್ಟು | **27** | **490** | **415** | **905** |

### ಶ್ರೀರಾಮ ಪದವಿಪೂರ್ವ ವಿದ್ಯಾಲಯ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| ಪ್ರಥಮ ಕಲಾ | 1 | 22 | 16 | 38 |
| ಪ್ರಥಮ ವಾಣಿಜ್ಯ | 4 | 112 | 82 | 194 |
| ಪ್ರಥಮ ವಿಜ್ಞಾನ | 2 | 53 | 97 | 150 |
| ದ್ವಿತೀಯ ಕಲಾ | 1 | 7 | 14 | 21 |
| ದ್ವಿತೀಯ ವಾಣಿಜ್ಯ | 4 | 115 | 86 | 201 |
| ದ್ವಿತೀಯ ವಿಜ್ಞಾನ | 2 | 66 | 84 | 150 |
| | **14** | **375** | **379** | **754** |

### ಶ್ರೀರಾಮ ಪದವಿ ವಿದ್ಯಾಲಯ

| ತರಗತಿ | ವಿಭಾಗ | ಗಂಡು | ಹೆಣ್ಣು | ಒಟ್ಟು |
|---|---|---|---|---|
| ಪ್ರಥಮ ಬಿಕಾಂ | 1 | 11 | 26 | **37** |
| ದ್ವಿತೀಯ ಬಿಕಾಂ | 1 | 11 | 20 | **31** |
| ತೃತೀಯ ಬಿಕಾಂ | 1 | 12 | 17 | **29** |
| ಪ್ರಥಮ ಬಿ ಎ | 1 | 6 | 14 | **20** |
| ದ್ವಿತೀಯ ಬಿ.ಎ | 1 | 3 | 10 | **13** |
| ತೃತೀಯ ಬಿ.ಎ | 1 | 2 | 9 | **11** |
| ಪ್ರಥಮ ಬಿ.ಸಿ.ಎ | 1 | 4 | 24 | **28** |
| ದ್ವಿತೀಯ ಬಿ.ಸಿ.ಎ | 1 | 3 | 26 | **29** |
| ತೃತೀಯ ಬಿ.ಸಿ.ಎ | 1 | 8 | 17 | **25** |
| | **9** | **60** | **163** | **223** |

| ವಿಭಾಗ | ಬೋಧಕರು | ಬೋಧ ಕೇತರರು | ಒಟ್ಟು |
|---|---|---|---|
| ಶಿಶುಮಂದಿರ | **10** | **9** | **19** |
| ಪ್ರಾಥಮಿಕ ಶಾಲೆ | **44** | **8** | **52** |
| ಪ್ರೌಢಶಾಲೆ | **34** | **8** | **42** |
| ಇಂಗ್ಲೀಷ್ ಮೀಡಿಯಂ ಸ್ಕೂಲ್ | **41** | **14** | **55** |
| ಪದವಿ ಪೂರ್ವ | **29** | **11** | **40** |
| ಪದವಿ | **24** | **7** | **31** |
| ಒಟ್ಟು | **182** | **57** | **239** |

### ಒಟ್ಟು ವಿದ್ಯಾರ್ಥಿಗಳು

| | |
|---|---|
| ಶಿಶುಮಂದಿರ | 258 |
| ಪ್ರಾಥಮಿಕ ಶಾಲೆ | 995 |
| ಪ್ರೌಢಶಾಲೆ | 833 |
| ಇಂಗ್ಲೀಷ್ ಮೀಡಿಯಂ | 905 |
| ಪದವಿ ಪೂರ್ವ | 754 |
| ಪದವಿ | 223 |

**3968**

| | |
|---|---|
| ವಿದ್ಯಾಕೇಂದ್ರ | 7 |
| ಚಾಲಕರು & ನಿರ್ವಾಹಕರು | 30 |
| ಪಾಕಶಾಲೆ | 8 |
| ವಸತಿ ನಿಲಯ | 9 |
| ಗೋಶಾಲೆ | 2 |
| ಒಟ್ಟು | 56 |

**ಒಟ್ಟು ಸಿಬ್ಬಂದಿ : 295**

**4263**

## ಇಂಗ್ಲಿಷ್ ಮೀಡಿಯಂ ಸ್ಕೂಲ್



**ಜ್ಞಾನ-ವಿಜ್ಞಾನ ಮೇಳ ಸ್ಪರ್ಧೆ 10.07.2026**

ಶ್ರೀರಾಮ ಇಂಗ್ಲಿಷ್ ಮೀಡಿಯಂ ಸ್ಕೂಲ್‌ನಲ್ಲಿ ಶಾಲಾ ಮಟ್ಟದ ಜ್ಞಾನವಿಜ್ಞಾನ ಮೇಳ ಸ್ಪರ್ಧೆಯು ನಡೆಯಿತು.



ಶಾಲಾ ಸಂಸತ್ತು ಉದ್ಘಾಟನೆ 15.07.2026

ಸಹ ಶಿಕ್ಷಕಿ ವೈಶಾಲಿ ವರದಿ ಮಂಡಿಸಿದರು. ಸಹ ಶಿಕ್ಷಕ ಶ್ರೀ ನಿತಿನ್ ಪ್ರಮಾಣ ವಚನ ಬೋಧಿಸಿದರು. ಕಾರ್ಯಕ್ರಮದಲ್ಲಿ ಬಂಟ್ವಾಳ ಟೌನ್ ಪೊಲೀಸ್ ಸ್ಟೇಷನ್‌ನ ASI ಶ್ರೀ ತಾರನಾಥ, ನ್ಯಾಯವಾದಿ ಶ್ರೀ ಪ್ರಸಾದ್, ವಿದ್ಯಾಕೇಂದ್ರದ ಸಂಚಾಲಕರಾದ ಶ್ರೀ ವಸಂತ ಮಾಧವ ಶ್ರೀಮಾನ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಹಾಗೂ ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಉಪಸ್ಥಿತರಿದ್ದರು.



**ಸಂಪ್ರದಾಯಿಕ ದಿನ ಮತ್ತು ಖಾದ್ಯೋತ್ಸವ ಕಾರ್ಯಕ್ರಮ: 20.7.2026**

ಆಡಳಿತ ಮಂಡಳಿ ಸದಸ್ಯರಾದ ಸುಧಾ ಭಟ್ ಕಳಕೋಡಿ ಇವರು ದೀಪ ಪ್ರಜ್ವಲನ ಮಾಡುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಶ್ರೀ ಧೀರಜ್ ಎಂ ಆಚಾರ್ಯ ಹಾಗೂ ಇಂಗ್ಲೀಷ್ ಮೀಡಿಯಂ ಸ್ಕೂಲ್‌ನ ಪ್ರಾಂಶುಪಾಲರಾದ ಶ್ರೀ ತಿರುಮಲೇಶ್ವರ ಪ್ರಶಾಂತ್ ಶ್ರೀಮಾನ್ ಉಪಸ್ಥಿತರಿದ್ದರು.

## ಪದವಿ ಪೂರ್ವ




**ರಾಷ್ಟ್ರೀಯ ವಿದ್ಯಾರ್ಥಿ ದಿವಸ್ ಆಚರಣೆ 09.07.2026**

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಕರ್ನಾಟಕ ದಕ್ಷಿಣ ಪ್ರಾಂತ್ಯದ ಅಧ್ಯಕ್ಷರಾದ ಶ್ರೀ ರವಿ ಎಂ. ಎನ್. (ಮಂಡ್ಯ) ಅವರು ಸಂಘಟನೆಯ ಉದ್ದೇಶಗಳು, ಕಾರ್ಯಚಟುವಟಿಕೆಗಳು ಕುರಿತು ತಿಳಿಸಿದರು. ಕನ್ನಡ ಉಪನ್ಯಾಸಕರಾದ ಶ್ರೀ ಅಶೋಕ್ ಕುಮಾರ್ ಹಾಗೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮಂಗಳೂರು ಜಿಲ್ಲಾ ವಿದ್ಯಾರ್ಥಿನಿ ಪ್ರಮುಖ್ ಕುಮಾರಿ ಪ್ರಿಯಾಂಕ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಅತಿಥಿಗಳ ಭೇಟಿ 15.07.2026




ಸರಸ್ವತಿ ವಂದನಾದಲ್ಲಿ ಶ್ರೀರಾಮ ವಿದ್ಯಾ-ಕೇಂದ್ರದ ಸಂಸ್ಥಾಪಕರು ಹಾಗೂ ವಿವೇಕಾನಂದ ವಿದ್ಯಾವರ್ಧಕ ಸಂಘ ಪುತ್ತೂರಿನ ಅಧ್ಯಕ್ಷರಾದ ಡಾ ಪ್ರಭಾಕರ ಭಟ್ ಕಲ್ಲಡ್ಕ, ಅಡ್ವೊಕೇಟ್ ಶ್ರೀ ಸಿದ್ಧಾರ್ಥ್ ಹೈಕೋರ್ಟ್ ವಕೀಲರು ಬೆಂಗಳೂರು, ಅಡ್ವೊಕೇಟ್ ಶ್ರೀ ವ್ಯಾಸ್ ಕಿರಣ್ ಉಪಾಧ್ಯ ಹೈಕೋರ್ಟ್ ವಕೀಲರು ಬೆಂಗಳೂರು, ಶ್ರೀ ಗಿರೀಶ್ ಉದ್ಯಮಿಗಳು ಬೆಂಗಳೂರು, ಶ್ರೀ ಪ್ರತಾಪ್ ಉದ್ಯಮಿಗಳು ಬೆಂಗಳೂರು, ಶ್ರೀ ರಮೇಶ್ ಕಾಸರಗೋಡು ಸಾಮಾಜಿಕ ಕಾರ್ಯಕರ್ತರು, ಶ್ರೀ ಪ್ರಶಾಂತ್ ಪಲ್ಲಮಜಲು ಕೋಲಾರ ವಿಭಾಗ ಪ್ರಚಾರಕರು ಹಾಗೂ ಶ್ರೀರಾಮ ವಿದ್ಯಾಕೇಂದ್ರದ ಹಿರಿಯ ವಿದ್ಯಾರ್ಥಿ, ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್ ಉಪಸ್ಥಿತರಿದ್ದರು.



ಎನ್‌ಸಿಸಿ ಘಟಕದ ವತಿಯಿಂದ ವಿದ್ಯಾರ್ಥಿಗಳಿಗೆ ರ‍್ಯಾಂಕ್ ವಿತರಣೆ ಕಾರ್ಯಕ್ರಮ 10.07.2026

ಮಾಜಿ ಸೈನಿಕ ಮತ್ತು ಪ್ರಸ್ತುತ 18 ಕರ್ನಾಟಕ ಬೆಟಾಲಿಯನ್ ಎನ್‌ಸಿಸಿಯಲ್ಲಿ ಪಿ.ಐ ಸಿಬ್ಬಂದಿಯಾಗಿ ಕಾರ್ಯನಿರ್ವಹಿಸುತ್ತಿರುವ ಯನ್.ಬಿ. ಪಾಟೀಲ್ ವಿದ್ಯಾರ್ಥಿಗಳಿಗೆ ತಮ್ಮ ಜವಾಬ್ದಾರಿಯ ಬಗ್ಗೆ ತಿಳಿಸಿಕೊಟ್ಟರು. ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ಉಪಪ್ರಾಂಶುಪಾಲರಾದ ಶ್ರೀ ದಿನೇಶ್ ಉಪಸ್ಥಿತರಿದ್ದರು.



ಪ್ರತಿಭಾನ್ವೇಷಣ" ಸಾಂಸ್ಕೃತಿಕ ಕಾರ್ಯಕ್ರಮ 10.07.2026 ಭಾವನಾ ಸಾಂಸ್ಕೃತಿಕ ಸಂಘದ ವತಿಯಿಂದ ಪ್ರಥಮ ಪಿಯುಸಿ ವಿದ್ಯಾರ್ಥಿಗಳಿಗಾಗಿ "ಪ್ರತಿಭಾನ್ವೇಷಣ" ಸಾಂಸ್ಕೃತಿಕ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಮುಖ್ಯ ಅತಿಥಿಯಾಗಿ ಹವ್ಯಾಸಿ ಯಕ್ಷಗಾನ ಕಲಾವಿದರು, ಕಟೀಲು ಮೇಳ ಹಾಗೂ ಶ್ರೀ ರಾಮ ಆಂಗ್ಲ ಮಾಧ್ಯಮ ವಿದ್ಯಾಲಯದ ಸಹ ಶಿಕ್ಷಕರಾದ ಶ್ರೀ ನಿತಿನ್ ಕಾರ್ಯಕ್ರಮವನ್ನು ಉದ್ಘಾಟಿಸಿ ಶುಭಹಾರೈಸಿದರು ನಂತರ ಪ್ರಥಮ ಪಿಯುಸಿ ವಿದ್ಯಾರ್ಥಿಗಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಿತು.



**ಗುರು ಪೂಜಾ ಉತ್ಸವ**
**ಸಾಮೂಹಿಕ ಹುಟ್ಟುಹಬ್ಬ**
**ಭಜನಾ ಕಾರ್ಯಕ್ರಮ**
**31.7.2026**

ಮಧುಕರ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ದೀಪ ಬೆಳಗಿಸಿ, ಭಾರತ ಮಾತೆಗೆ ಪುಷ್ಪಾರ್ಚನೆ ಮಾಡುವ ಮೂಲಕ ಅತಿಥಿಗಳು ಚಾಲನೆ ನೀಡಿದರು. ವಿದ್ಯಾಕೇಂದ್ರದ ಸಹಸಂಚಾಲಕರಾದ ಶ್ರೀ ರಮೇಶ್ ಶ್ರೀಮಾನ್, ನಿವೃತ್ತ ಶಾರೀರಿಕ ಶಿಕ್ಷಣ ಶಿಕ್ಷಕರು ಶ್ರೀ ಶಂಕರ್ ವಿ ಹಾಗೂ ಬೋಳಂತೂರು ಹಿರಿಯ ಪ್ರಾಥಮಿಕ ಶಾಲೆಯ ನಿವೃತ್ತ ಮುಖ್ಯೋಪಾಧ್ಯಾಯರು ಶ್ರೀ ಪರಮೇಶ್ವರಯ್ಯ ಮತ್ತು ಹಿರಿಯ ಪ್ರಾಥಮಿಕ ಶಾಲೆ ಮೋಂತಿಮಾರಿನ ನಿವೃತ್ತ ಮುಖ್ಯ ಶಿಕ್ಷಕಿ ಶ್ರೀಮತಿ ದೇವಕಿ, ಶ್ರೀರಾಮ ಪ್ರೌಢಶಾಲೆಯ ಮುಖ್ಯ ಗುರುಗಳಾದ ಶ್ರೀ ಗೋಪಾಲ್ ಶ್ರೀಮಾನ್, ಉಪಸ್ಥಿತರಿದ್ದರು. ಹಿರಿಯ ನಿವೃತ್ತ ಶಿಕ್ಷಕ-ಶಿಕ್ಷಕಿರಿಗೆ ಗುರುವಂದನ ನಡೆಯಿತು. ಶ್ರೀರಾಮ ಪ್ರೌಢಶಾಲೆಯ ಹಿರಿಯ ಶಿಕ್ಷಕರಾದ ಜಯರಾಮ ಶ್ರೀಮಾನ್ ಗುರುಪೂಜೆಯ ಮಹತ್ವವನ್ನು ತಿಳಿಸಿದರು.

## ಕ್ರೀಡಾ ಸಾಧಕರು









**ಕ್ಷೇತ್ರ ಮಟ್ಟಕ್ಕೆ ಆಯ್ಕೆ:** 10ನೇ ತರಗತಿ ಶ್ರೇಯಾಂಕ್ ಉದ್ದ ಜಿಗಿತದಲ್ಲಿ ಪ್ರಥಮ, 10ನೇ ತರಗತಿಯ ಸಂಕೀರ್ತ್ ಶೆಟ್ಟಿ ಚಕ್ರ ಎಸೆತದಲ್ಲಿ ಪ್ರಥಮ, 10ನೇ ತರಗತಿಯ ಗುರುನಂದನ್ ರೈ 5 ಕಿಲೋ ಮೀಟರ್ ನಡಿಗೆಯಲ್ಲಿ ಪ್ರಥಮ ಸ್ಥಾನ ಮತ್ತು 400 ಮೀಟರ್ ಹರ್ಡಲ್ಸ್ ನಲ್ಲಿ ತೃತೀಯ ಸ್ಥಾನ, 8ನೇ ತರಗತಿಯ ಸ್ವಸಿಕ್ ಉದ್ದ ಜಿಗಿತದಲ್ಲಿ ದ್ವಿತೀಯ, 9ನೇ ತರಗತಿ ಸಂದನ 3 ಕಿಲೋ ಮೀಟರ್ ನಡಿಗೆಯಲ್ಲಿ ದ್ವಿತೀಯ ಸ್ಥಾನವನ್ನು ಪಡೆದು ಕ್ಷೇತ್ರ ಮಟ್ಟಕ್ಕೆ ಆಯ್ಕೆಯಾಗಿರುತ್ತಾರೆ. 9ನೇ ತರಗತಿಯ ಜಾನ್ವಿ ರಾಜ್ಯಮಟ್ಟದ ಕ್ರೀಡಾಕೂಟದಲ್ಲಿ ಚಕ್ರ ಎಸೆತದಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾಳೆ.

**ರಾಜ್ಯಮಟ್ಟಕ್ಕೆ ಆಯ್ಕೆ:** 10ನೇ ತರಗತಿಯ ದೀಕ್ಷಣ್ ಈಟಿ ಎಸೆತದಲ್ಲಿ ಪ್ರಥಮ, 8ನೇ ತರಗತಿಯ ಸನ್ವಿ ಚಕ್ರ ಎಸೆದಲ್ಲಿ ದ್ವಿತೀಯ ಸ್ಥಾನ ಪಡೆದು ರಾಜ್ಯ ಮಟ್ಟಕ್ಕೆ ಆಯ್ಕೆ ಆಗಿರುತ್ತಾರೆ.

**ಜಿಲ್ಲಾಮಟ್ಟದ ಕ್ರೀಡಾಕೂಟದಲ್ಲಿ ಭಾಗಿ:** 10ನೇ ತರಗತಿಯ ಸಾನ್ವಿ ತ್ರಿವಿಧ ಜಿಗಿತದಲ್ಲಿ ತೃತೀಯ ಸ್ಥಾನ, 9ನೇ ತರಗತಿಯ ಲಕ್ಷ್ಯ 100ಮೀಟರ್ ಹರ್ಡಲ್ಸ್ ಮತ್ತು 400 ಮೀಟರ್ ಹರ್ಡಲ್ಸ್‌ನಲ್ಲಿ ತೃತೀಯ ಸ್ಥಾನ ಪಡೆದಿರುತ್ತಾರೆ.




ಮಾನಸ 9ನೇ ತರಗತಿ 40 ಕೆಜಿ ವಿಭಾಗದ ತಾಲೂಕು ಮಟ್ಟದ ಕರಾಟೆ ಸ್ಪರ್ಧೆಯಲ್ಲಿ ಭಾಗವಹಿಸಿ ದ್ವಿತೀಯ ಸ್ಥಾನವನ್ನು ಪಡೆದಿರುತ್ತಾಳೆ.

ವಿದ್ಯಾಭಾರತಿ ಜಿಲ್ಲಾ ಮಟ್ಟದ ಕ್ರೀಡಾಕೂಟದಲ್ಲಿ ಶ್ರೀ ರಾಮ ಆಂಗ್ಲ ಮಾಧ್ಯಮ ಶಾಲೆ ಕಲ್ಲಡ್ಕ ಇಲ್ಲಿನ ವಿದ್ಯಾರ್ಥಿನಿ ಜೈಶ್ರವಿ 9ನೇ ತರಗತಿ 17ರ ವಯೋಮಾನದ ಬಾಲಕಿಯರ ಜಾವೆಲಿನ್ ತ್ರೋ ವಿಭಾಗದಲ್ಲಿ ತೃತೀಯ ಸ್ಥಾನವನ್ನು ಪಡೆದಿರುತ್ತಾಳೆ.




**ಚದುರಂಗ ಸ್ಪರ್ಧೆಯಲ್ಲಿ ಪ್ರಾಂತ ಮಟ್ಟಕ್ಕೆ ಆಯ್ಕೆ 07.07.26:** ಸರಸ್ವತಿ ವಿದ್ಯಾಲಯ ಕಡಬದಲ್ಲಿ ನಡೆದ ವಿದ್ಯಾಭಾರತಿ ದಕ್ಷಿಣ ಕನ್ನಡ ಜಿಲ್ಲಾ ಮಟ್ಟದ ಚದುರಂಗ ಸ್ಪರ್ಧೆಯಲ್ಲಿ ತರುಣ ವಿಭಾಗದಲ್ಲಿ ಬಾಲಕರ ತಂಡವು ಪ್ರಥಮ ಸ್ಥಾನ ಪಡೆದು ಪ್ರಾಂತ ಮಟ್ಟಕ್ಕೆ ಆಯ್ಕೆಯಾಗಿದೆ ಹಾಗೂ ಬಾಲಕಿಯರ ತಂಡವು ದ್ವಿತೀಯ ಸ್ಥಾನ ಪಡೆದಿದೆ.

**ಸನಾತನಾ ಈ ಚೇತನಾ ಗೀತೆಯ ಧ್ವನಿ, ದೃಶ್ಯ ಬಿಡುಗಡೆ 16.7.26.**



ರಾಷ್ಟ್ರೀಯ ಸ್ವಯಂಸೇವಕ ಸಂಘ ಶತಾಬ್ದಿ ವರ್ಷ ಪೂರೈಸಿ ಮುಂದುವರಿದ ಶುಭ ಸಂದರ್ಭದ ಪ್ರಯುಕ್ತ "ಸನಾತನಾ ಈ ಚೇತನಾ" ಶೀರ್ಷಿಕೆಯಲ್ಲಿ, ಶ್ರೀ ಕೆ ಮಹೇಂದ್ರ ನಾಥ್ ಸಾಲೆತ್ತೂರು ಅವರ ಸಾಹಿತ್ಯದಲ್ಲಿ ಶ್ರೀ ಚಂದ್ರಶೇಖರ ಆಚಾರ್ಯ ಕಲ್ಲಡ್ಕ ಹಾಡಿರುವ ಹಾಡಿನ ಧ್ವನಿ ಮತ್ತು ದೃಶ್ಯ ಬಿಡುಗಡೆಯ ಕಾರ್ಯಕ್ರಮ ನಡೆಯಿತು. ಪುತ್ತೂರು ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷರಾದ ಡಾ.ಪ್ರಭಾಕರ ಭಟ್ ಕಲ್ಲಡ್ಕ ಅವರು ಶುಭಹಾರೈಸಿದರು, ಸಂಚಾಲಕರಾದ ಶ್ರೀ ವಸಂತ ಮಾಧವ, ಶ್ರೀ ಮಹೇಂದ್ರನಾಥ್ ಸಾಲೆತ್ತೂರು, ಶ್ರೀ ಚಂದ್ರಶೇಖರ ಆಚಾರ್ಯ, ಡಾ.ಕಮಲಾ ಪ್ರಭಾಕರ ಭಟ್, ಪ.ಪೂ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ವಸಂತ ಬಲ್ಲಾಳ್, ವಿದ್ಯಾಕೇಂದ್ರದ ಕಾರ್ಯ ನಿರ್ವಹಣಾಧಿಕಾರಿ ಶ್ರೀ ಕೃಷ್ಣಪ್ರಸಾದ್ ಕಾಯರ್‌ಕಟ್ಟೆ, ಚಿತ್ರದ ಗಾಯಕರಾದ ಶ್ರೀ ಚಂದ್ರಶೇಖರ ಆಚಾರ್ಯ ಉಪಸ್ಥಿತರಿದ್ದರು.


ಶುಭಕೋರುವ :

**ಶ್ರೀರಾಮ ಸೌಹಾರ್ದ ಸಹಕಾರಿ ನಿಯಮಿತ**

ಪ್ರಧಾನ ಕಚೇರಿ: ಹನುಮಾನ್ ನಗರ ಕಲ್ಲಡ್ಕ ಬಂಟ್ವಾಳ ತಾಲೂಕು 574222 ದೂ: 8147249173

**ಶಾಖೆ : ಶ್ರೀರಾಮ ವಾಣಿಜ್ಯ ಸಂಕೀರ್ಣ ರಾಮನಗರ ಕಲ್ಲಡ್ಕ**

ಕಲ್ಲಡ್ಕ ಶ್ರೀರಾಮ ವಾಣಿಜ್ಯ ಸಂಕೀರ್ಣದ ರಾಮ ನಗರ ಶಾಖೆಯಲ್ಲಿ E-Stamping ಠಸೆ ಕಾಗದ ಸೌಲಭ್ಯವಿದೆ

ಸಾಲ ಸೌಲಭ್ಯಗಳು

| | | |
|---|---|---|
| ಚಿನ್ನಾಭರಣ ಸಾಲ | – | 11% |
| ಜಾಮೀನು ಸಾಲ | – | 16.5% |
| ಅಡವು ಸಾಲ | – | 13.5% |
| ವಾಹನ ಸಾಲ | – | 12% |
| ಗೃಹ ನಿರ್ಮಾಣ ಸಾಲ | – | 11.5% |

ಠೇವಣಿ ಮೇಲೆ ಆಕರ್ಷಕ ಬಡ್ಡಿ ದರಗಳು

| | | |
|---|---|---|
| 91ದಿನಗಳವರೆಗೆ | – | 7% |
| 92ರಿಂದ 181 ದಿನಗಳು | – | 7.5% |
| 182 ರಿಂದ 364 ದಿನಗಳು | – | 8.5% |
| 1 ವರ್ಷ ಮತ್ತು ಮೇಲ್ಪಟ್ಟು | – | 9.5% |

ಸೌಲಭ್ಯ

ಆವರ್ತನ ಠೇವಣಿ (R.D)
ಸಂಚಯ ಠೇವಣಿ (S.D)
ನಿರಂತರ ಠೇವಣಿ (ಪಿಗ್ಮಿ)

ಹಿರಿಯ ನಾಗರಿಕರಿಗೆ ಮಾಜಿ ಯೋಧರಿಗೆ ಮತ್ತು ವಿಧವೆಯರಿಗೆ 0.5% ಬಡ್ಡಿ ಹೆಚ್ಚಿಗೆ ನೀಡಲಾಗುವುದು.



**Postal Regn No. PTR/136/2025-27**  **Licensed to Post without pre-payment**  **License No: SK/WPP/PTR/117/2025-27**

ಸರಯೂ

Vol. : 13  Issue :3  Rs. 10/-

**KARKAN/2014/62363**
Posted at Kalladka P.O.
on 10th and 15th of
Every month

SRI RAMA VIDYAKENDRA TRUST (R.) Hanuman Nagar, Kalladka,
Bantwal Tq., Dakshina Kannada, Karnataka 574 222
Website : www.shriramakalladka.in, www.srvk.org
E-mail : sriramakalladka@gmail.com

BOOK POST

ಸವಿಧೇ,

Sarayu Kannada Monthly Edited and Published and Printed by B. Narayana Somayaji on behalf of Sri Rama Vidyakendra Trust, Hanuman Nagara, Kalladka, Bantwal Tq, Dakshina Kannada - 574 222. Phone : 9449728763. Printed at Digantha Mudrana Ltd. Mangaluru 575008, Bantwal Tq., Dakshina Kannada, Karnataka. Registration No. : KARKAN/2014/62363